**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ- 31/2015**

(ಪ್ರಾ.ಸಾ-14 ಚಾ.ಸಾ.-14 )

ತಾಃ-18.09.2018 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ಎಂ.ಬಾಲಾಜಿ

ತಂದೆಯ ಹೆಸರು : ಮುನಿವೆಂಕಟಪ್ಪ
ವಯಸ್ಸು : 32 ವರ್ಷ
ಉದ್ಯೋಗ : ಪಿ ಎಸ್ ಐ, ಎಸ್ ಟಿ ಎಫ್, ಬೆಂಗಳೂರು
ವಾಸ ಸ್ಥಳ : ಬೆಂಗಳೂರು

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

ಸೆಪ್ಟೆಂಬರ್ 2013 ರಿಂದ 2016 ರ ಫೆಬ್ರವರಿವರೆಗೆ ದೊಡ್ಡಬೆಳವಂಗಲ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕೆಲಸ ಮಾಡಿರುತ್ತೇನೆ.

ದಿನಾಂಕ 24-02-2014 ರಂದು ಪಿ ಸಿ ಹುಸೇನ್ ಸಾಬ್ 1376 ಇವರು ಒಂದು ಸ್ಕೂಟರ್, ಇಬ್ಬರು ಆರೋಪಿಳಾದ ಕೃಷ್ಣ, ರಾಜೇಶ್ ಇವರನ್ನು ವರದಿಯೊಂದಿಗೆ ಹಾಜರುಪಡಿಸಿದರು. ವರದಿಯನ್ನು ಪರಿಶೀಲಿಸಿ ಠಾಣಾ ಮೊಕದ್ದಮೆ ಸಂಖ್ಯೆ 48/14ಕ್ಕೆ ಬಾದಾಸಂ ಕಲಂ 41(ಡಿ) , 102 ಸಿ ಆರ್ ಪಿ ಸಿ ಜೊತೆ 379 ಐಪಿಸಿ ಅಡಿ ಪ್ರಕರಣ ದಾಖಲಿಸಿಕೊಂಡು ಎಫ್ ಐ ಆರ್ ತಯಾರಿಸಿ ಮೂಲ ಎಫ್ ಐ ಆರ್ ಮತ್ತು ವರದಿಯನ್ನು ಮಾನ್ಯ

ದೊಡ್ಡಬಳ್ಳಾಪುರ ಸಿ ಜೆ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಕ್ಕೆ ಕಳುಹಿಸಿ ಪ್ರತಿಗಳನ್ನು ಮೇಲಧಿಕಾರಿಗಳಿಗೆ ಕಳುಹಿಸಿದೆನು. ಈಗ ನನಗೆ ತೋರಿಸುತ್ತಿರುವ ನಿಪಿ -24 ವರದಿಯನ್ನು ನೋಡುತ್ತಿದ್ದು ಸದರಿ ದಾಖಲೆ ಮೂಲ ವರದಿಯ ದೃಡೀಕೃತ ಪ್ರತಿ ಇರುತ್ತದೆ. ಅದರಲ್ಲಿ ದೃಡೀಕರಿಸಿದ ಕುರಿತು ನನ್ನ ಸಹಿ ಇದೆ. ನಿಪಿ-24 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸುತ್ತಿರುವ ಪ್ರಥಮ ವರ್ತಮಾನ ವರದಿಯ ದೃಡೀಕೃತ ಪ್ರತಿಯನ್ನು ನೋಡುತ್ತಿದ್ದು ಸದರಿ ದಾಖಲೆ ಮೂಲ ಪ್ರಥಮ ವರ್ತಮಾನ ವರದಿಯ ದೃಡೀಕೃತ ಪ್ರತಿ ಇರುತ್ತದೆ. ಅದರಲ್ಲಿ ದೃಡೀಕರಿಸಿದ ಕುರಿತು ನನ್ನ ಸಹಿ ಇದೆ. ಸದರಿ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ನಿಪಿ 32 ಎಂದು ಹಾಗೂ ನಿಪಿ 32 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 32(ಎ) ಎಂದು ಗುರುತಿಸಲಾಯಿತು. (ನಿಪಿ 24 ಹಾಗೂ 32 ಮೂಲ ದಾಖಲಾತಿಗಳು ಎ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ ದೊಡ್ಡಬಳ್ಳಾಪುರದ ಸಿ.ಸಿ ನಂ. 369/15 ರಲ್ಲಿ ಇದ್ದು ಸದರಿ ಕೇಸ್ ಫೈಲ್ ಎಸ್ ಸಿ 46/15 ರಲ್ಲಿ ತರಿಸಲಾಗಿದೆ.)

ಆರೋಪಿತರ ಬಳಿ ದೊರೆತ ಬಜಾಜ್ ಚೇತಕ್ ಸ್ಕೂಟರ್ ಕೆಎ 05 ಆರ್ 3975 ವಾಹನದಲ್ಲಿ ದೊರೆತ ಎರಡು ಕಬ್ಬಿಣದ ರಾಡುಗಳು, ಒಂದು ವೀಲ್ ಸ್ಪ್ಯಾನರ್, ಒಂದು ಕಬ್ಬಿಣದ ಚಾಕು ಇವುಗಳನ್ನು ಠಾಣಾ ಆವರಣದಲ್ಲಿ ಪಂಚರಾದ ಚಂದ್ರಶೇಖರಯ್ಯ ಮತ್ತು ಗೋವಿಂದರಾಜು ಇವರ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ 30/14ರಲ್ಲಿ

ಅಳವಡಿಸಿಕೊಂಡಿರುತ್ತೇನೆ. ಸದರಿ ಮಹಜರನ್ನು ಬೆಳಗ್ಗೆ 6-15 ರಿಂದ 6-45 ಗಂಟೆವರೆಗೆ ಮಾಡಿರುತ್ತೇನೆ.

ಈಗ ನನಗೆ ತೋರಿಸುತ್ತಿರುವ ಸದರಿ ಮಹಜರ್‌ನ ದೃಡೀಕೃತ ಪ್ರತಿ ನಿಪಿ 22 ನ್ನು ನೋಡುತ್ತಿದ್ದು ಸದರಿ ದಾಖಲೆ ಮೂಲ ಮಹಜರ್‌ನ ದೃಡೀಕೃತ ಪ್ರತಿ ಇರುತ್ತದೆ. ಅದರಲ್ಲಿ ದೃಡೀಕರಿಸಿದ ಕುರಿತು ನನ್ನ ಸಹಿ ಇದೆ. ನಿಪಿ 22 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 22(ಸಿ) ಎಂದು ಗುರುತಿಸಲಾಯಿತು. (ನಿಪಿ 22 ಮೂಲ ದಾಖಲಾತಿ ಎ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ ದೊಡ್ಡಬಳ್ಳಾಪುರದ ಸಿ.ಸಿ ನಂ. 369/15 ರಲ್ಲಿ ಇದ್ದು ಸದರಿ ಕೇಸ್ ಫೈಲ್ ಎಸ್ ಸಿ 46/15 ರಲ್ಲಿ ತರಿಸಲಾಗಿದೆ.)

ಮೇಲೆ ಹೇಳಿದ ಆರೋಪಿತರ ಅಂಗ ಶೋಧನೆ ಕಾಲಕ್ಕೆ ಆರೋಪಿ ಕೃಷ್ಣನಿಂದ ಪರಿಶೀಲನೆ ಸಮಯದಲ್ಲಿ ಆತನ ಪ್ಯಾಂಟ್ ಜೇಬಿನಲ್ಲಿದ್ದ ಒಂದು ಚಿನ್ನದ ಸರವನ್ನು ಪಂಚರಾದ ಚಂದ್ರಶೇಖರಯ್ಯ ಮತ್ತು ಗೋವಿಂದರಾಜು ಇವರ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ 31/14ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಮಹಜರನ್ನು ಬೆಳಗ್ಗೆ 6 ರಿಂದ 6-30 ಗಂಟೆವರೆಗೆ ಮಾಡಿರುತ್ತೇನೆ. ನಂತರ ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ಆರೋಪಿತರು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ದಾಬಾಸ್‌ಪೇಟೆ ಪೋಲೀಸ್ ಠಾಣೆಗೆ ಸಂಬಂಧಪಟ್ಟ ಈ ಪ್ರಕರಣ, ರಾಮನಗರ, ಬಿಡದಿ ಠಾಣೆಗಳಿಗೆ ಸಂಬಂಧಿಸಿದಂತೆ ಪ್ರಕರಣಗಳ ಕುರಿತು ನುಡಿದಿರುತ್ತಾರೆ.

ಅದೇ ದಿನ ಕೃಷ್ಣ ಮತ್ತು ರಾಜೇಶ್‌ರವರ ಸ್ವಇಚ್ಛಾ ಹೇಳಿಕೆಗಳ ಆಧಾರದ ಮೇಲೆ ನೆಲಮಂಗಲದ ಹುಣಸೇ ಮರ ಕ್ರಾಸ್ ಬಳಿ ಇನ್ನಿಬ್ಬರು ಆರೋಪಿತರಾದ ಚಂದ್ರ ಮತ್ತು ನವೀನ್‌ನನ್ನು ಮದ್ಯಾಹ್ನ ವಶಕ್ಕೆ ಪಡೆದು ಠಾಣೆಗೆ ಬಂದು ಅವರನ್ನು ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಅನುಸರಿಸಿದೆನು. ನಂತರ ಸದರಿ ಇಬ್ಬರು ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ನಂತರ ಅದೇ ದಿನ ಸದರಿ ಮೇಲೆ ಹೇಳಿದ ನಾಲ್ಕು ಜನ ಆರೋಪಿತರನ್ನು ಎ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ ದೊಡ್ಡಬಳ್ಳಾಪುರದ ನ್ಯಾಯಾಲಯಕ್ಕೆ ಹಾಜರುಪಡಿಸಿ ಅವರುಗಳನ್ನು ಪೋಲೀಸ್ ಕಸ್ಟಡಿಗೆ ಪಡೆದುಕೊಂಡೆನು.

ಅದೇ ದಿನ ಪಿಸಿ 926 ಬಲರಾಂರವರ ಹೇಳಿಕೆ ಪಡೆದಕೊಂಡೆನು.

ದಿನಾಂಕ 26.02.2014 ರಂದು ದಾಬಾಸ್‌ಪೇಟೆ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 35/14 ರಲ್ಲಿ ಪಿರ್ಯಾದುದಾರರಾದ ಶ್ರೀ ರಘು ಮತ್ತು ಅವರ ಜೊತೆಯಲ್ಲಿದ್ದ ಸಂತೋಷರವರನ್ನು ಠಾಣೆಗೆ ಕರೆಸಿ ಮೇಲೆ ಹೇಳಿದ ನಾಲ್ಕು ಜನ ಆರೋಪಿತರನ್ನು ತೋರಿಸಿ ಅವರ ಹೇಳಿಕೆಗಳನ್ನು ಪಡೆದುಕೊಂಡೆನು. ಸಾಕ್ಷಿ ರಘು ನನ್ನ ಮುಂದೆ ನಿಪಿ-7 ರಂತೆ ಹೇಳಿಕೆ ನೀಡಿದ್ದಾರೆ.

ನಂತರ ಉಳಿದ ಆರೋಪಿತರ ಪತ್ತೆಗಾಗಿ ದಿನಾಂಕ 01.03.2014 ರಂದು ಪಿಸಿ 1381 ಜಯರಾಂ , ಪಿಸಿ 1241 ಗಂಗಾಧರ್ ಇವರನ್ನು ನೇಮಿಸಿದ್ದೆನು. ಇವರು ಆರೋಪಿಯಾದ ಚಂದೂ ರಾಥೋಡ್ ಈತನನ್ನು ತುಮಕೂರಿನ ಅರಕೆರೆ ಬಳಿ ಇದ್ದವನನ್ನು ಬೆಳಗಿನ ಜಾವ ಹಿಡಿದುಕೊಂಡು ನನ್ನ ಮುಂದೆ ಠಾಣೆಯಲ್ಲಿ ಬೆಳಗ್ಗೆ 7.30 ಗಂಟೆಗೆ ಹಾಜರುಪಡಿಸಿದರು. ನಂತರ ಆತನನ್ನು ವಿಚಾರ ಮಾಡಿ ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಅನುಸರಿಸಿದೆನು. ನಂತರ ಸದರಿ ಆರೋಪಿತನ ಸ್ವಇಚ್ಛಾ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ಸದರಿ ಮೇಲೆ ಹೇಳಿದ ಸದರಿ ಆರೋಪಿತನನ್ನು ಎ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ ದೊಡ್ಡಬಳ್ಳಾಪುರದ ನ್ಯಾಯಾಲಯಕ್ಕೆ ಹಾಜರುಪಡಿಸಿ ಆತನನ್ನು ಪೋಲೀಸ್ ಕಸ್ಟಡಿಗೆ ಪಡೆದುಕೊಂಡೆನು.

ದಿನಾಂಕ 02.03.2014 ರಂದು ಮೇಲೆ ಹೇಳಿದ ಐದೂ ಜನ ಆರೋಪಿತರು ತಮ್ಮ ಸ್ವಇಚ್ಛಾ ಹೇಳಿಕೆಗಳಲ್ಲಿ ದಾಬಾಸ್‌ಪೇಟೆ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 35/14 ರಲ್ಲಿ ಸಂಬಂಧಿಸಿದಂತೆ ದಾಬಾಸ್‌ಪೇಟೆ ಟೌನ್ ಹೆಚ್ ಡಿ ಎಫ್ ಸಿ ಬ್ಯಾಂಕ್ ಎ ಟಿ ಎಂ ನಲ್ಲಿ ಹಣ ಡ್ರಾ ಮಾಡಿದ ಬಗ್ಗೆ ತಿಳಿಸಿದ್ದು ಸದರಿ ಸ್ಥಳಕ್ಕೆ ಸದರಿ ಆರೋಪಿತರೊಂದಿಗೆ ಹೋಗಿ ಅಲ್ಲಿ ಪಂಚರಾದ ವೆಂಕಟಾಚಲಯ್ಯ ಮತ್ತು ಮಂಜು ಬಿನ್ ಗಂಗಯ್ಯ, ಮಂಜುನಾಥ ಬಿನ್ ರಾಜಶೇಖರಯ್ಯರವರ ಸಮಕ್ಷಮ ಮಹಜರ್ ಜರುಗಿಸಿದೆನು.

**(ಈ ಹಂತದಲ್ಲಿ ಮಾನ್ಯ ಪಿಪಿರವರ ವಿನಂತಿಯ ಮೇರೆಗೆ ಮುಂದುರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

**{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}**

**ಓ ಹೇ ಸಾ ಸ ಸಹಿ ಮಾಡಿದ್ದಾರೆ.**

**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**